# ನಾಂದಿಪದ



ಒಂದು ಕಾಲದಲ್ಲಿ ಪ್ರೀತಿ, ಪ್ರೇಮ, ಥ್ರಿಲ್ಲರ್, ಪತ್ತೇದಾರಿ ಕತೆ, ಕಾದಂಬರಿಗಳು ಓದುಗರನ್ನು ಇನ್ನಿಲ್ಲದಂತೆ ಸೆಳೆಯುತ್ತಿದ್ದವು. ಸಮಯ ಕಳೆಯಲು ಆಗ ಇದ್ದದ್ದು ಈ ಕತೆ, ಕಾದಂಬರಿಗಳೇ. ಕನ್ನಡ ಮಾತ್ರವಲ್ಲ ಅನೇಕ ಭಾಷೆಯ ಓದುಗರು ಗಂಭೀರವಾದ, ಅಭಿಜಾತ ಕೃತಿಗಳ ಕಡೆಗೆ ತಮ್ಮ ಮನಸ್ಸನ್ನು ತಿರುಗಿಸಿದ್ದು, ತೊಡಗಿಸಿಕೊಂಡಿದ್ದು ಈ ಜನಪ್ರಿಯ, ಭಾವಹಗುರ ಸಾಹಿತ್ಯದ ಓದಿನ ಬಳಿಕವೇ. ಈ ಬಗೆಯ ಕತೆ, ಕಾದಂಬರಿಗಳನ್ನು ಈ ಹಿಂದೆ ಪತ್ರಿಕೆಗಳು ಕೂಡ ಅವಲಂಬಿಸಿದ್ದವು. ಅವುಗಳ ಪ್ರಸಾರ ಸಹ ಹೆಚ್ಚುಕಡಿಮೆ ಅವುಗಳಿಂದಲೇ ನಿರ್ಧಾರವಾಗುತ್ತಿತ್ತು. ಓದಿನ ರುಚಿ ಬೆಳೆಸುವ ದಿಸೆಯಲ್ಲಿ 'ಚಂದಮಾಮ', 'ಬಾಲಮಿತ್ರ'ಗಳಂತಹ ಮಕ್ಕಳ ಪತ್ರಿಕೆಗಳ ಕೊಡುಗೆಯೂ ಕಡಿಮೆ ಏನಲ್ಲ.

ಮೂರು, ನಾಲ್ಕು ದಶಕಗಳ ಹಿಂದೆ ಅ.ನ.ಕೃ., ತ.ರಾ.ಸು., ಎನ್. ನರಸಿಂಹಯ್ಯ, ಕೃಷ್ಣಮೂರ್ತಿ ಪುರಾಣಿಕ, ನಂತರ ಸಾಯಿಸುತೆ, ಎಚ್.ಜಿ. ರಾಧಾದೇವಿ, ಉಷಾ ನವರತ್ನರಾಮ್, ಟಿ.ಕೆ. ರಾಮರಾವ್, ತೆಲುಗು ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡು ಕನ್ನಡ ಲೇಖಕರೇ ಆಗಿಹೋದ ಯಂಡಮೂರಿ ವೀರೇಂದ್ರನಾಥ್, ಮಲ್ಲಾದಿ ವೆಂಕಟಕೃಷ್ಣಮೂರ್ತಿ, ಹಿಂದಿಯ ಗುಲ್ಶನ್ ನಂದಾ– ಹೀಗೆ ಈ ಬರಹಗಾರರ ಬರವಣಿಗೆಗಳ ಮೂಲಕವೇ ಈಗಿನ ಬಹುಪಾಲು ಓದುಗರು ತಮ್ಮ ಯೌವನವನ್ನು ಹಾದುಬಂದಿದ್ದಾರೆ. ಈ ಬಗೆಯ ಲೇಖಕರೇ ಸಾಹಿತ್ಯಕ್ಕೆ ಓದುಗರನ್ನು ಉಳಿಸಿಕೊಟ್ಟವರು ಎಂಬುದು ಮಹತ್ವದ ಅಂಶ. ಸಿದ್ಧಸೂತ್ರಗಳ, ಕ್ಷಣಕ್ಷಣಕ್ಕೂ ರೋಮಾಂಚನದ ಅಲೆಯಲ್ಲಿ ತೇಲಿಸುವ ಈ ಸಾಹಿತ್ಯ ಈಗ ಹಿಂದಕ್ಕೆ ಸರಿದಿದೆ. ಸುಗಮ ಸಂಗೀತದಂತೆ ಅದಕ್ಕೂ ಅಲ್ಪಆಯುಷ್ಯ. ಕೆಲವು ಲೇಖಕರು ರೋಚಕ ಸಾಹಿತ್ಯಕ್ಕೆ ಮಾರುಕಟ್ಟೆ ಇಲ್ಲದಿರುವುದನ್ನು ಮನಗಂಡು ವ್ಯಕ್ತಿತ್ವವನ್ನು ವಿಕಾಸ(!)ಗೊಳಿಸುವ ಪುಸ್ತಕಗಳ ಕಡೆ ಹೊರಳಿದರು. ಅಲ್ಪಕಾಲ ಜನರನ್ನು ಸೆಳೆದ ಈ ಪುಸ್ತಕಗಳು ಓದಿದವರ ವ್ಯಕ್ತಿತ್ವವನ್ನು ಎಷ್ಟು ಇಂಚು ಹೆಚ್ಚಿಸಿದವು ಎಂಬುದನ್ನು ಯಾರೂ ಅಳತೆ ಮಾಡಲಿಲ್ಲ.

ಮನುಷ್ಯ ಸಂಬಂಧಗಳು, ಅವುಗಳ ನಾಟಕೀಯತೆ, ಪ್ರೀತಿ, ಸಾಹಸದ ವಸ್ತುಗಳೇ ಇರುವ, ತಲೆಗೆ ಹೆಚ್ಚು ಕೆಲಸ ಕೊಡದ ಈ ಸಾಹಿತ್ಯ ಕನ್ನಡದಲ್ಲಿ ಬದಲಾದ ಕಾಲಕ್ಕೆ ತಕ್ಕಂತೆ ರೂಪಾಂತರಗೊಳ್ಳಲಿಲ್ಲ. ಈ ಕತೆಗಳಲ್ಲಿ ಬರುತ್ತಿದ್ದ ಸುಕೋಮಲ ಹೆಣ್ಣುಮಕ್ಕಳಿಗೆ ಒಂದೇ ಅಚ್ಚಿನ, ಸಾಂಪ್ರದಾಯಿಕ ವ್ಯಕ್ತಿತ್ವವಿತ್ತು. ಒಳ್ಳೆಯವರು ಕೆಟ್ಟವರು ಎಂಬ ಕಪ್ಪು ಬಿಳುಪಿನ ಚಿತ್ರಣ ಅವುಗಳಲ್ಲಿತ್ತು. ಬರೀ ಎದೆ ಕರಗಿಸುವ ಅಳುಮುಂಜಿತನವಿತ್ತು. ಇವು ರೂಢಿಗತ ಸಾಮಾಜಿಕ ನಂಬಿಕೆಗಳನ್ನೇ ಬೆಳೆಸಿಕೊಂಡು ಬಂದವು. ಯಶಸ್ಸಿನ ಅನುಕರಣೆ ಮಾಡುವ ಎಲ್ಲ ಜನಪ್ರಿಯ ಕಲೆಗಳಂತೆಯೇ ಅವೂ ಸಹ ರಂಜನೆಯ ಒಂದೇ ಸೂತ್ರವನ್ನು ಹಿಡಿದುಕೊಂಡು ಹೊರಟವು. ಆದರೆ, ಅವು ಮಾಡಿದ ಪರಿಣಾಮ ಮಾತ್ರ ದೊಡ್ಡದಾಗಿತ್ತು. ಅಪಾರ ಸಂಖ್ಯೆಯ ಓದುಗರನ್ನು ಅವು ಮುಟ್ಟಿದವು, ಸೃಷ್ಟಿಸಿದವು.

ಓದು ಕೇವಲ ಗಂಭೀರ ಸಾಹಿತ್ಯ ಕೃತಿಗಳನ್ನು ಮನನ ಮಾಡುವುದರಲ್ಲಿ ಮಾತ್ರ ಇರುವುದಿಲ್ಲ. ನಮ್ಮನ್ನು ಚಣಕಾಲ ಮುದಗೊಳಿಸುವ, ಚಕಿತಗೊಳಿಸುವ, ವಾಸ್ತವದಿಂದ ಕೊಂಚ ದೂರ ಕರೆದೊಯ್ಯುವ ದೆವ್ವದ ಕತೆಗಳು, ವೈಜ್ಞಾನಿಕ ಕತೆಗಳು, ಪತ್ತೇದಾರಿ ಕತೆಗಳು, ಕಿನ್ನರರ ರಮ್ಯ ಕತೆಗಳು ಬೇಕಾಗುತ್ತವೆ. ಈಗಲೂ ಅಂಥ ಕತೆಗಳಿಗೆ ಅಪಾರ ಅವಕಾಶಗಳಿವೆ. ಹಳ್ಳಿಯ ಹುಡುಗಿಯೊಬ್ಬಳ ಸರಳ ಪ್ರೇಮಕತೆಯೊಂದು ಬರೆದವರಿಗೆ ಹೆಸರು, ಹಣ ಎರಡನ್ನೂ ತಂದುಕೊಡಬಹುದು. ಕತೆಯ ನಾಳಿನ ಯಕ್ಷಿಣಿಯನ್ನು ಬಲ್ಲವರು ಯಾರು?

'ಮಯೂರ' ಓದುಗರನ್ನು ಪರವಶಗೊಳಿಸುವ, ಒಲಿಸಿಕೊಳ್ಳುವ ಗರಿಹಗುರ ಕತೆಗಳನ್ನು ಸ್ವಾಗತಿಸುತ್ತದೆ.

**ಸಂದೀಪ ನಾಯಕ**